ಅಸಲು ದಾವಾ ಸಂಖ್ಯೆ 218/2021

ಪಿ ಡಬ್ಲ್ಯೂ: 1

**<u>ದಿನಾಂಕ : 03.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 3 ಮತ್ತು 4ನೇ ಪ್ರತಿವಾದಿಗಳ ಪರ ಶ್ರೀ ಕೆ ಬಿ ವಕೀಲರಿಂದ</u>**

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ವಿದ್ಯಾಭ್ಯಾಸ ಇಲ್ಲದೇ ಇರುವ ಕಾರಣ ನನ್ನ ವಕೀಲರಿಗೆ ಹೇಳಿ ಬರೆಸಿದ್ದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿನ ಸಂಗತಿಗಳನ್ನು ವಕೀಲರು ನನಗೆ ಹೇಳಿದ್ದರು. ಈಗ್ಗೆ 30 ವರ್ಷಗಳಿಂದಲೂ ಸಹಾ ನಾನು ದಾವಾ ಅನುಸೂಚಿತ ಸ್ವತ್ತುಗಳಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ಒಟ್ಟು 7 ಎಕರೆ ಸ್ವತ್ತಿನಲ್ಲಿ ವಿಭಾಗ ಬೇಕು ಎಂದು ದಾವೆ ಸಲ್ಲಿಸಿದ್ದೇನೆ. ಆದರೆ ನನಗೆ ಸರ್ವೆ ನಂಬರ್ ಗೊತ್ತಿರುವುದಿಲ್ಲ, ಭೂಮಿಗಳ ಹೆಸರನ್ನು ಹೇಳುತ್ತೇನೆ.

ಪ್ರತಿವಾದಿ 3 ಮತ್ತು 4ರವರು ಈಗ್ಗೆ 10 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿಯವರುಗಳು ಈಗ್ಗೆ 10 ವರ್ಷಗಳ ಹಿಂದೆ ಗ್ರಾಮದ ಮುಖಂಡರ ಸಮಕ್ಷಮ ಮೌಖಿಕವಾಗಿ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಆದರೆ ವಿಭಾಗವಾಗಿಲ್ಲ ಹೆಂಗಸರ ನಡುವಿನ ಗಲಾಟೆಗಾಗಿ ಅವರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ 3 ಮತ್ತು 4ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡಿರುವ ಕಾರಣದಿಂದಲೇ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ದಿನ ನಾನು, 1 ಮತ್ತು 2ನೇ ಪ್ರತಿವಾದಿಗಳು ಸಹಾ ಮುಖಂಡರ ಸಮಕ್ಷಮ ಹಾಜರಿದ್ದು, ಆ ಸಮಯದಲ್ಲಿ 1 ಮತ್ತು 2ನೇ ಪ್ರತಿವಾದಿಗಳಿಗೆ ಹಣ ಮತ್ತು ಚಿನ್ನವನ್ನು ಹಾಗೂ ನನಗೆ ಹಣ, ಚಿನ್ನ ಮತ್ತು ಸರ್ವೆ ನಂಬರ್ 146/11 ರ ಜಮೀನಿನಲ್ಲಿ 6 ಸೆಂಟ್ ಸ್ವತ್ತನ್ನು ಕೊಡಲಾಗಿತ್ತು ಎಂದರೆ ಸರಿಯಲ್ಲ. ನಾವು ಸದರಿ ಸ್ವತ್ತನ್ನು ವಿಭಾಗದ ಮೂಲಕ ಪಡೆದಕೊಂಡಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತತ ಸರ್ವೆ ನಂಬರ್ 146/11 ರ ಸ್ವತ್ತು ನನ್ನ ಪತಿಯ ಹೆಸರಿನಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ನಾವು ವಿಭಾಗ ಪಡೆದುಕೊಂಡಿದ್ದರೂ ಸಹಾ ಸುಳ್ಳು ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಗಳು ತಮ್ಮ ವಿಭಾಗದ ಸ್ವತ್ತನ್ನು ಪಡೆದಿರುವ ಕಾರಣ ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಾಗಿರುವುದಿಲ್ಲ ಎಂದರ ಸಾಕ್ಷಿಯು ಅವರು ನಮಗೆ ವಿಭಾಗ ಬೇಡ ಎಂದು ಹೇಳಿದ್ದರು ಹಾಗಾಗಿ ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಸ್ವತ್ತು ಈಗಾಗಲೇ ವಿಭಾಗವಾಗಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

( ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ